ಇದ್ದ ನನಗೆ, ಮಗಳು ಎಂಜಿನಿಯರಿಂಗ್ ಮುಗಿಸಿ ವಿದೇಶಕ್ಕೆ ಉನ್ನತ ವಿದ್ಯಾಭ್ಯಾಸಕ್ಕೆ ತೆರಳಿದಾಗ ನನ್ನ ರುಟೀನ್ ಬದಲಾಗಬೇಕಾಯಿತು! ಅದುವರೆಗೂ ಒಬ್ಬನೇ ಊರಿಗೆ ಹೋಗಿ ಬರುತ್ತಿದ್ದ ಪತಿಗೆ ಅಲ್ಪಸ್ವಲ್ಪ ಕೆಮ್ಮು, ಅದು ಇದೂ ಎಂದೂ, ಪಾಪ ಒಬ್ಬನೇ ಅಡುಗೆ ಮಾಡ್ಕೊಳ್ತಾ ಒದ್ದಾಡುತ್ತಾನೆಂದು ತೀರದ ಅನುಕಂಪ ತೋರುವ ನೆಂಟರ ಮುಂದೆ ಭಾರೀ ಜೋರಿನವಳೆಂದು ಸಾಬೀತಾಗುವುದು ಬೇಡ ಎಂದು ಅವನೊಂದಿಗೆ ಅನಿವಾರ್ಯವಾಗಿ ಊರಿಗೆ ಹೊರಡಲು ಆರಂಭಿಸಿದೆ.

ಆಗಲೇ ಈ ಅವ್ಯಕ್ತವಾದ ಚಡಪಡಿಕೆಯನ್ನೂ ಅನುಭವಿಸಲು ಆರಂಭಿಸಿದ್ದು. ಒಂದೆರಡು ವರ್ಷಗಳಲ್ಲಿ ತಿಂಗಳು ತಿಂಗಳು ಊರಿಗೆ ಹೊರಡುವುದೆಂದರೆ ನಂಗೆ ಶಿಕ್ಷೆ ಕೊಡುವುದಕ್ಕಾಗಿಯೇ ನನ್ನವರು ಹೊರಡಿಸುತ್ತಿದ್ದಾರೊ ಏನೋ ಎನ್ನುವಂತೆ ಸಿಡಿಮಿಡಿಗೊಳ್ಳುತ್ತಿದ್ದೆ. ದಿನಕ್ಕೆ ಇಪ್ಪತ್ತು ಬಾರಿಯಾದರೂ ಹೋಗುವ ಕರೆಂಟು, ಕರೆಂಟು ಬಾರದೇ ಟ್ಯಾಂಕಿಗೆ ನೀರು ಲಿಫ್ಟ್ ಮಾಡಲು ಆಗದೇ ಕಾಣುವ ನೀರಿನ ಸಂಕಷ್ಟ, ಮಳೆಗಾಲದಲ್ಲಿ ಬಿಡದೇ ಸುರಿಯುವ ಮಳೆ ಮತ್ತು ಪ್ರತಿ ಸಾರಿ ಬಂದಾಗಲೂ ಕಣ್ಣಿಗೆ ಕಾಣುವ ಹೊಸ ಹೊಸ, ರಾಶಿ ಕ್ರಿಮಿಕೀಟಗಳ ಜೀವಸಂಕುಲ, ಇದರಿಂದ ನನ್ನ ವ್ಯವಸ್ಥಿತ ಪುಟ್ಟ ಪ್ರಪಂಚ ಅಲುಗಾಡತೊಡಗಿತ್ತು. ದಶಕಗಳ ಕಾಲ ನಡೆದು ಬಂದ ದಿನನಿತ್ಯದ ಕ್ಷಣಗಳಲ್ಲಿ ಬದಲಾವಣೆ ಆಗತೊಡಗಿದಂತೇ ಚಡಪಡಿಸಲು ಶುರು ಮಾಡಿದ್ದೆ. ಇದೆಲ್ಲ ನಡೆಯುತ್ತಾ ಒಂದೆರಡು ವರ್ಷಗಳಾಗುತ್ತಾ ಬಂದರೂ ಈ ಹೊಸ ವ್ಯವಸ್ಥೆಗೆ ನನಗೆ ಹೊಂದಿಕೊಳ್ಳಲು ಕಷ್ಟವೇ ಆಯಿತೋ ಅಥವಾ ನಾನು ಹೊಂದಿಕೊಳ್ಳಲಿಲ್ಲವೊ, ಹೊಂದಿಕೊಂಡು ಬಿಟ್ಟರೆ ಈ ಮನುಷ್ಯ ಎಲ್ಲಿ ಊರಿನಲ್ಲೇ ಪರ್ಮನೆಂಟಾಗಿ ತಳವೂರುತ್ತಾರೋ ಎನ್ನುವ ಆತಂಕದಲ್ಲಿ ನಾನು ಅರೆಮನಸ್ಸಿನಿಂದ ದಿನ ತಳ್ಳುತ್ತಿದ್ದೆ.

ಬಂದು ಎರಡ್ಮೂರು ದಿನಗಳು ಯಾವುದರಲ್ಲಿಯೂ ಆಸಕ್ತಿಯಿಲ್ಲದಂತೆ ಇರುವ ನನ್ನ ಅನ್ಯ ಮನಸ್ಕತೆಯನ್ನು ಗಮನಿಸುವ ಪತಿ, ಸಂಜೆಯಾಗುವ ಹೊತ್ತಿಗೆ 'ಹೊರಡು, ಪುತ್ತೂರಿಗೆ ಹೋಗಿ ಬರೋಣ ಬಾ. ಫಿಲೋಮಿನಾಸ್ ಕಾಲೇಜು ರಸ್ತೆಯಲ್ಲಿ ಒಬ್ಬ ಒಳ್ಳೆಯ ಸಾದಾ ದೋಸೆ ಕೊಡ್ತಾನೆ' ಎಂದು ಹೊರಡಿಸುತ್ತಾನೆ ಎನ್ನುವ ನಿಶ್ಚಿತ ಪ್ಲಾನಿನ ಅರಿವಿರುವ ನಾನು 'ಇದೆಲ್ಲ ಇವನಿಗರ್ಥವಾಗಲ್ಲ' ಎಂದುಕೊಳ್ಳುತ್ತಾ ಸೊಸೈಟಿಯಲ್ಲಿ ಕೆಲಸವಿದೆ ಎಂದು ಪತಿ ಹೊರಟ ತಕ್ಷಣ, ಚಾವಡಿಯಲ್ಲಿ ಬಂದು ಕೂತು ಉದಾಸೀನದಿಂದಲೇ ಕಣ್ಣು ಹೊರಳಿಸುತ್ತಿದ್ದೆ. ಆಗ ಎದುರಿಗೇ ಅನಾಯಾಸವಾಗಿ ಕಂಡಿತು ಬಂಟಮಲೆ.

ಪಶ್ಚಿಮ ಘಟ್ಟದ ತಪ್ಪಲಿನ ಒಂದು ಪುಟ್ಟ ಭಾಗವಾದರೂ ಈ ಬಂಟಮಲೆ ಕಣ್ಣು ಚಾಚಿದಷ್ಟೂ ಅಗಲಕ್ಕೂ ಎತ್ತರಕ್ಕೂ ಆವರಿಸಿ ಮೈ ಚೆಲ್ಲಿದಂತಿತ್ತು. ಸುಳ್ಯ ತಾಲೂಕಿನ ಹೆಮ್ಮೆ ಈ ಬಂಟಮಲೆ, ಪೂಮಲೆ ಎಲ್ಲವೂ. ರಾವಣ ಸೀತೆಯನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ತನ್ನ ದಾರಿಯ ಗುರುತು ಸಿಕ್ಕಿ ಕಾಪಾಡಲು ಬರಲು ಸಹಾಯವಾಗಲೆಂದು ತನ್ನ ಹೆರಳಿನ ಆಭರಣವನ್ನು ಸೀತೆ ಇಲ್ಲಿ ಎಸೆದ ಕಾರಣ ಇದು ಪೂಮಲೆಯೆಂದು ಹೆಸರಾಗಿದೆ ಎಂದೇ ನಂಬಿಕೆ. ತೋಟದ ಅಂಚಿನಿಂದ ಶುರುವಾಗುವ ಈ ಕಾಡು, ತಾನು ಹೀಗೆ ಮುಗಿಲೆತ್ತರಕ್ಕೆ ಬೆಳೆದು ನಿಂತಿರುವುದರ ಪರಿವೆಯೇ ಇಲ್ಲದಂತೆ ಒಂಥರಾ ಧ್ಯಾನಕ್ಕೆ ನಿಂತಂತೆ ಕಾಣುತ್ತಿತ್ತು. ಓಹ್! ಇದರ ಧೀಮಂತಿಕೆಯೇ! ಎಷ್ಟೇ ಚಡಪಡಿಕೆ, ಅತಂತ್ರದ ಭಾವ, ಅಸಹನೆ ಮನದಲ್ಲಿದ್ದರೂ ಈ ಬಂಟಮಲೆ ಕಣ್ಣಿಗೆ ಬಿದ್ದ ಕೂಡಲೇ ಕಾಡಿನ ಒಡೆಯ ಆನೆಯೆದುರು ಮಂಡಿಯೂರುವ ಹುಲಿಯಂತೇ ಅದರ ಮುಂದಿರುವವರು ಮನದಲ್ಲಿಯೇ ಶರಣಾಗಿ ಬಿಡುತ್ತಾರೆ. ಮರುಕ್ಷಣದಲ್ಲಿ ಮನದಲ್ಲಿ ಪ್ರಶ್ನೆಗಳೂ ಮೂಡುತ್ತವೆ. ಒತ್ತೊತ್ತಾಗಿ ಹೀಗೆ ಮರ ನೆಟ್ಟವರಾರು!

ಅಲ್ಲೂ ಒಂದು ಲೋಕವಿರಬಹುದೇ, ಕಣ್ಣು ಹಾಯಿಸಿದಷ್ಟೂ ದೂರಕ್ಕೂ ಲಕ್ಷಾಂತರ ಹಸಿರು ರಥಗಳು ಎದ್ದು ನಿಂತಂತಿದೆ. ಈ ರಥಗಳು ಚಲಿಸುತ್ತವೆಯೋ. ಮೊನ್ನೆಯಷ್ಟೇ ಅಮೆರಿಕದ ಕಾಡಿನಲ್ಲಿ ನಡೆಯುವ ಮರಗಳು ಇದ್ದಾವೆಂದು ಓದಿದ್ದೂ ನೆನಪಾಯಿತು. ನೀರನ್ನರಸಿಕೊಂಡು ಈ ಮರಗಳು ನಡೆಯುತ್ತವಂತೆ! ಮನುಷ್ಯ ತಾನಷ್ಟೇ ಬುದ್ಧಿವಂತ ಅಂದುಕೊಂಡಿದ್ದಾನೆ. ಪ್ರಕೃತಿಯ ಆಟ, ಲೆಕ್ಕಾಚಾರದ ಮುಂದೆ ಮನುಷ್ಯನೂ ಒಂದು ಹುಳವೇ ತಾನೇ! ಇವುಗಳೂ ಪಿಸುಗುಟ್ಟುತ್ತಾ ಮಾತಾಡುತ್ತಿರಬಹುದೇ. ಓಹ್, ಈ ಹಸಿರಿನಲ್ಲಿಯೂ ಅದೆಷ್ಟು ವಿಧ. ದಟ್ಟ ಹಸಿರು, ತಿಳಿ ಹಸಿರು, ಗಿಳಿ ಹಸಿರು, ಕೆಮ್ಮಿಶ್ರಿತ ಹಸಿರು... ದೂರದಿಂದ ಕಪ್ಪಾಗಿ ಕಾಣುವ ಹಸಿರು... ಹೀಗೆ ಕಣ್ಣಿಗೆ ಕಂಡ ಹಸಿರಿನ ವಿಧಗಳನ್ನು